**Witness is present and duly sworn on 07.03.2026.**

**Further examination in chief for the defendant : by Sri. AKV counsel for defendant :**

I have produced the following documents and the same may be marked as exhibits on my behalf.

| Documents | Exhibits |
|---|---|
| Certified copy of the orders passed by the Hon'ble High Court of Karnataka in W.P.1089/2013 dated 19.03.2025 | **Ex.D.8** |

(Plaintiff counsel prays time for cross examination. Time granted).

(Computerized to my dictation in the open court as deposed by the witness.)

**R. O. I. & A. C.,**

**(PRASHANTHI.G)**
**IX Addl. C.C. & S.J., Bengaluru.**

**ದಿಃ01-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ವಾದಿ ಪರ ಶ್ರೀ ಮತಿ. ಎ.ಎನ್.ಎಸ್ ವಕೀಲರಿಂದ ಃ**

1. ಬೆಂಗಳೂರು ಕೇಂದ್ರ ವಿಭಾಗದಲ್ಲಿ ನಾನು ಕ್ಯಾಶಿಯರ್ ಆಗಿ 2000 ದಿಂದ 2002 ರವರೆಗೂ ಕರ್ತವ್ಯ ನಿರ್ವಹಿಸಿದ್ದೇನೆ. ಕ್ಯಾಶಿಯರ್ ಆಗಿ ನಾನು ನಗದನ್ನು ಸ್ವೀಕರಿಸುತ್ತಿದ್ದೆ ಮತ್ತು ವಿತರಣೆ ಮಾಡುತ್ತಿದ್ದೆ.

2. ನಿ.ಪಿ.7 ರಲ್ಲಿ ಯಾರು ಯಾರಿಗೆ ನಗದು ವಿತರಣೆ ಮಾಡುವ ಬಗ್ಗೆ ವಿವರಣೆ ಇದೆ ಮತ್ತು ನನ್ನ ಸಹಿ ಇದೆ. ಸದರಿ ವಿವರಣೆಯನ್ನು ನಾನೇ ಬರೆದಿದ್ದೇನೆ ಎಂದರೆ ಸರಿ. ನಿ.ಪಿ.7 ರಲ್ಲಿ ಬರೆದ ರೀತಿಯಲ್ಲಿ ಯಾರು ಯಾರಿಗೆ ನಗದು ವಿತರಣೆ ನಾನು ಮಾಡಿದ್ದೇನೆ ಎಂದು ಬರೆದಿದ್ದೇನೋ ಸದರಿ ಉದ್ಯೋಗಿಗಳು ವಿತರಣೆಯಾಗಿಲ್ಲ ಎಂಬ ಬಗ್ಗೆ ಹೇಳಿಕೆ ನೀಡಿದ್ದಾರೆ ಎಂದರೆ ಸರಿ.

3. ಆಡಿಟ್ ರಿಪೋರ್ಟ್ ನೀಡಿದ ನಂತರ ನನ್ನ ವಿರುದ್ಧ ಮತ್ತು ನನ್ನ ಜೊತೆ ಇರುವ 8 ಜನ ಸಹೋದ್ಯೋಗಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ಹಾಕಿದ್ದಾರೆ ಎಂದರೆ ಸರಿ. ಕ್ರಿಮಿನಲ್ ಪ್ರಕರಣ ಆದ ನಂತರ ನಾನು ಸಂಸ್ಥೆಗೆ ರೂ.75,000/-ಗಳನ್ನು ಕಟ್ಟಿದ್ದೇನೆ ಎಂದರೆ ಸುಳ್ಳು. ದಿನಾಂಕ 01.10.2008 ರಲ್ಲಿ ನನ್ನನ್ನು ಕೆಲಸದಿಂದ ವಜಾ ಮಾಡಿದ್ದರು ಎಂದರೆ ಸರಿ. ಸದರಿ ವಜಾ ಮಾಡಿದ ಆದೇಶದಲ್ಲಿ ನಾನು ಸಂಸ್ಥೆಗೆ ರೂ.75,000/-ಗಳನ್ನು ಕಟ್ಟಿದ್ದೇನೆ ಮತ್ತು ಉಳಿದ ರೂ.9,66,719/-ಗಳನ್ನು ಪಾವತಿ ಮಾಡಲು ಬದ್ಧರು ಎಂದು ಆದೇಶ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಸಂಸ್ಥೆಗೆ ರೂ.75,000/-ಗಳನ್ನು ಕಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ ವಜಾ ಮಾಡಿದ ಆದೇಶವನ್ನು ನಾನು ಲೇಬರ್ ಕೋರ್ಟಿನಲ್ಲಿ ಪ್ರಶ್ನಿಸಿದ್ದೇನೆ ಎಂದರೆ ಸರಿ. ಲೇಬರ್ ಕೋರ್ಟಿನಲ್ಲಿ ನಾನು ನನ್ನ ವಜಾ ಆದೇಶವನ್ನು ಮಾತ್ರ ಪ್ರಶ್ನಿಸಿದ್ದೇನೆಯೇ ಹೊರತು ಸದರಿ ವಜಾ ಆದೇಶದಲ್ಲಿ ರೂ.9,66,719/-ಗಳನ್ನು ಪಾವತಿ ಮಾಡಲು ನಾನು ಬದ್ಧ ಎಂದು ಇರುವ ಆದೇಶವನ್ನು

ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.7 ಲೇಬರ್ ಕೋರ್ಟ್ ಮಾಡಿದ ಆದೇಶ ಎಂದರೆ ಸರಿ. ನಿ.ಡಿ.7 ರಲ್ಲಿ ನನ್ನನ್ನು ಮರುನೇಮಕ ಮಾಡಿ ಎಂಬ ಬಗ್ಗೆ ಮಾತ್ರ ಆದೇಶವಾಗಿದ್ದು ರೂ.9,66,719/-ಗಳ ಬಗ್ಗೆ ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.7 ರ ಆದೇಶದ ವಿರುದ್ಧ ಲೇಬರ್ ಕೋರ್ಟ್ ನಿ.ಡಿ.8 ರಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ನಿ.ಡಿ.8 ರಲ್ಲಿ ನಾನು ವಾದಿ ಸಂಸ್ಥೆಗೆ ರೂ.75,000/- ಕಟ್ಟಿದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ನನ್ನನ್ನು ಮರುನೇಮಕಾತಿ ಮಾಡಿದ್ದರು ಎಂದರೆ ಸಾಕ್ಷಿ ಲೇಬರ್ ಕೋರ್ಟಿನ ಆದೇಶದ ಪ್ರಕಾರವೇ 2012 ರಿಂದ ನನ್ನನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ಲೇಬರ್ ಕೋರ್ಟಿನ ಆದೇಶ ಮಧ್ಯಂತರ ಅರ್ಜಿಯ ಮೇಲಿನ ಆದೇಶವಾಗಿತ್ತು. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿಯೂ ಸಹ ರೂ.9,66,719/-ಗಳ ಬದ್ಧತೆಯ ಬಗ್ಗೆ ಯಾವುದೇ ನಿರ್ದಿಷ್ಟ ಆದೇಶ ಇಲ್ಲ ಎಂದರೆ ಸರಿ. ವಾದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಮತ್ತು ಉಳಿದ 8 ಜನ ಸಹೋದ್ಯೋಗಿಗಳು ಸೇರಿಕೊಂಡು ಸಂಸ್ಥೆಯ ಹಣವನ್ನು ದುರುಪಯೋಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ರೂ.9,66,719/-ಗಳನ್ನು ವಾದಿ ಸಂಸ್ಥೆಗೆ ನೀಡಲು ಬದ್ಧ ಎಂದರೆ ಸರಿಯಲ್ಲ.

4. ನಿ.ಡಿ.1 ರಿಂದ 6 ರ ದಾಖಲೆಗಳಿಗೂ ಮತ್ತು ವಾದಿ ಹಾಕಿರುವ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.